ಎಂ.ವಿ.ಸಿ.720/2023, ಪಿ.ಡಬ್ಲೂ-1 ಹೆಸರುಃ ರಂಗಸ್ವಾಮಿ

**ದಿಃ10-12-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್ ವಿ ವಕೀಲರಿಂದಃ**

ನಾನು 3 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದೇನೆ. 3 ಮತ್ತು 4 ನೇ ಅರ್ಜಿದಾರರು ನನ್ನ ಅಕ್ಕಂದಿರು. 6 ನೇ ಅರ್ಜಿದಾರರು ನನ್ನ ತಂಗಿ. 3 ಮತ್ತು 4 ನೇ ಅರ್ಜಿದಾರರಿಗೆ ವಿವಾಹವಾಗಿದ್ದು, ಅವರ ವೈವಾಹಿಕ ಮನೆಗಳಲ್ಲಿ ಇದ್ದಾರೆ. 6 ನೇ ಅರ್ಜಿದಾರರಿಗೆ ವಿವಾಹವಾಗಿಲ್ಲ. 2 ನೇ ಅರ್ಜಿದಾರರಾದ ದೇವಮ್ಮರವರು ನನ್ನ ತಂದೆಯ 2 ನೇ ಪತ್ನಿಯಾದ ರಂಗಮ್ಮರವರ ಮಗಳು. ರಂಗಮ್ಮರವರು ಮೃತಪಟ್ಟಿರುತ್ತಾರೆ. ದೇವಮ್ಮರವರಿಗೆ ವಿವಾಹವಾಗಿದ್ದು, ಆಕೆಯ ವೈವಾಹಿಕ ಕುಟುಂಬದಲ್ಲಿ ವಾಸಿಸುತ್ತಿದ್ದಾರೆ. ನನಗೆ ವಿವಾಹವಾಗಿದ್ದು, ಇಬ್ಬರು ಮಕ್ಕಳಿದ್ದಾರೆ. ನಾನು ವ್ಯವಸಾಯ ಮಾಡುತ್ತಿದ್ದೇನೆ. ನಾನು ವ್ಯವಸಾಯ ಮಾಡಿಕೊಂಡು ನನ್ನ ತಾಯಿ ಮತ್ತು ತಂಗಿಯಾದ ಜಯಮ್ಮರವರನ್ನು ನೋಡಿಕೊಳ್ಳುತ್ತಿದ್ದೇನೆ. ನನ್ನ ತಂದೆಯಾದ ಮೃತ ರಾಮಪ್ಪರವರಿಗೆ ಸಂಬಂಧಿಸಿದಂತೆ ಹಳೆಯ ಆಧಾರ್ ಕಾರ್ಡ್ ಇತ್ತು. ಆ ನಂತರದಲ್ಲಿ ಮಾಡಿಸಿಲ್ಲ. ಸದರಿ ಹಳೆಯ ಆಧಾರ್ ಕಾರ್ಡ್ ನನ್ನ ಬಳಿ ಇಲ್ಲ. ನನ್ನ ತಂದೆ ದಿಃ 16.07.1960 ರಲ್ಲಿ ಜನಿಸಿದ್ದಾರೆ ಎಂದು ನಿಪಿ-9 ರಲ್ಲಿ ನಮೂದು ಇದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ನನ್ನ ತಂದೆಗೆ 63 ರಿಂದ 64 ವರ್ಷ ವಯಸ್ಸು ಎಂದರೆ ಸರಿ. ನನ್ನ ತಂದೆಗೆ ವಯಸ್ಸಾಗಿದ್ದ ಕಾರಣ ಕಣ್ಣು ಸಂಪೂರ್ಣವಾಗಿ ಕಾಣಿಸುತ್ತಿರಲಿಲ್ಲ ಮತ್ತು ಕಿವಿ ಕೇಳಿಸುತ್ತಿರಲಿಲ್ಲ ಎಂದರೆ ಸರಿ. ನನ್ನ ತಂದೆಗೆ ವಯಸ್ಸಾಗಿದ್ದ ಕಾರಣ ಅವರು ಯಾವುದೇ ದುಡಿಮೆ ಮಾಡುತ್ತಿರಲಿಲ್ಲ, ಹಾಗಾಗಿ ನಾನೇ ನನ್ನ ತಂದೆಯನ್ನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿ.

2. ಅಪಘಾತವನ್ನು ನಾನು ಖುದ್ದಾಗಿ ನೋಡಿಲ್ಲ. ಅಪಘಾತದ ಸಮಯದಲ್ಲಿ ನಾನು ಊರಿನಲ್ಲಿ ಇದ್ದೆನು. ಅಪಘಾತದ ಕುರಿತು ನನಗೆ ಹರೀಶ ಎಂಬುವವರು ದೂರವಾಣಿ ಮೂಲಕ ತಿಳಿಸಿದ್ದು, ನಂತರ ನಾನು ಸ್ಥಳಕ್ಕೆ ಹೋಗಿ ನೋಡಿದಾಗ ನನ್ನ ತಂದೆ ಕಾರಿನ ಅಪಘಾತದಲ್ಲಿ ಗಾಯಗೊಂಡಿದ್ದ ಬಗ್ಗೆ ತಿಳಿಯಿತು. ನಂತರ ನಾನು ನನ್ನ ತಂದೆಯನ್ನು ಆಟೋದಲ್ಲಿ ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಅಪಘಾತದ ಕುರಿತು ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಹಳೇಹಳ್ಳಿ ಕಡೆಯಿಂದ ಕಾರಿನ ಚಾಲಕ ವೇಗವಾಗಿ ಬಂದು ನನ್ನ ತಂದೆಗೆ ಡಿಕ್ಕಿಪಡಿಸಿ ಅಪಘಾತ ಪಡಿಸಿದ್ದರು ಎಂದು ತಿಳಿಯಿತು. ನನ್ನ ತಂದೆಗೆ ಕಣ್ಣು ಕಾಣಿಸುತ್ತಿರಲಿಲ್ಲ ಹಾಗೂ ಕಿವಿ ಕೇಳಿಸುತ್ತಿರಲಿಲ್ಲ, ಹಾಗಾಗಿ ನನ್ನ ತಂದೆಯೇ

ರಸ್ತೆಗೆ ಅಡ್ಡಲಾಗಿ ಹೋಗಿ ಅಪಘಾತಕ್ಕೆ ಈಡಾಗಿದ್ದಾರೆ ಎಂದರೆ ಸರಿಯಲ್ಲ. ಅಪಘಾತವು ಕಾರಿನ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತದ ಕುರಿತು ಪೊಲೀಸರಿಗೆ ನಾನೇ ದೂರನ್ನು ನೀಡಿರುತ್ತೇನೆ. ನಾನು ನೀಡಿರುವ ದೂರಿನಲ್ಲಿ ಕಾರಿನ ಚಾಲಕನ ಹೆಸರು ಸಂತೋಷ್ ಕುಮಾರ್ ಎಂದು ಬರೆಸಿರುತ್ತೇನೆ. ನಾನು ನೀಡಿರುವ ನಿಪಿ-1 ರ ದೂರಿನಲ್ಲಿ ಕಾರಿನ ಚಾಲಕನ ಹೆಸರನ್ನು ನಮೂದು ಮಾಡಿಲ್ಲ ಮತ್ತು ಅಪಘಾತದ ನಂತರ ಕಾರಿನ ಚಾಲಕ ಓಡಿ ಹೋಗಿರುತ್ತಾನೆ ಎಂದು ಉಲ್ಲೇಖ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರ ದೂರಿನಲ್ಲಿ ಚಾಲಕನ ಹೆಸರನ್ನು ನಮೂದು ಮಾಡದಿದ್ದಾಗ್ಯೂ, ನಮೂದು ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆದ ಎರಡು ಮೂರು ದಿನಗಳ ನಂತರ ಕಾರಿನ ಚಾಲಕನ ಹೆಸರು ಸಂತೋಷ್ ಎಂದು ತಿಳಿಯಿತು. ನಾನು ದೂರು ನೀಡಿದ ದಿನದಂದು ಚಾಲಕನ ಹೆಸರು ಹೇಳಿಲ್ಲ ಎಂದರೆ ಸರಿ.

3. ಕೆಎ-30-ಎಂ-9562 ರ ಕಾರಿನ ಮಾಲೀಕರು ರಾಜೀವ್ ಮಂಜುನಾಥ್ ನಾಯ್ಕ ಎಂದರೆ ಸರಿ. ಕಾರಿನ ಮಾಲೀಕರ ಊರು ಕಾರವಾರ. ಕಾರಿನ ಚಾಲಕನಾದ ಸಂತೋಷ್ ಯಾವ ಊರಿನವರು ಎಂದು ಗೊತ್ತಿಲ್ಲ. ಕಾರಿನ ಚಾಲಕನ ಊರು ಹೊಳಲ್ಕೆರೆ ತಾಲ್ಲೂಕಿನ ಕೊಡಗವಳ್ಳಿ ಎಂದರೆ ಸರಿ. ಅಪಘಾತದ ಎರಡು ಮೂರು ದಿನಗಳ ನಂತರ ಪೊಲೀಸರು ಚಾಲಕನ ಬಗ್ಗೆ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಅಪಘಾತದ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಹಾಗಾಗಿ ಚಾಲಕನ ಕುರಿತು ನನಗೆ ಹರೀಶ ಎಂಬುವವರು ತಿಳಿಸಿದರು. ಅಪಘಾತದಲ್ಲಿ ನನ್ನ ತಂದೆ ಮೃತಪಟ್ಟಿದ್ದರಿಂದ ನಾವು ದುಃಖದಲ್ಲಿ ಇದ್ದು, ಹಾಗಾಗಿ ಹರೀಶ ಚಾಲಕನ ಬಗ್ಗೆ ನನಗೆ ಹೇಳಿದ್ದ ವಿಚಾರದ ಕುರಿತು ನಾನು ದೂರಿನಲ್ಲಿ ಹೇಳಿಲ್ಲ. ಅಪಘಾತದ ಸಮಯದಲ್ಲಿ ಸಂತೋಷ ಕಾರನ್ನು ಚಾಲನೆ ಮಾಡುತ್ತಿರಲಿಲ್ಲ, ಬದಲಾಗಿ ಕಾರಿನ ಮಾಲೀಕರಾದ ರಾಜೀವ್ ಮಂಜುನಾಥ ನಾಯ್ಕ ರವರೇ ಕಾರನ್ನು ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ಕುರಿತು ಇಬ್ಬರು ಮೊಬೈಲ್ ಸಂಖ್ಯೆಗಳ ಟವರ್ ಸ್ಥಳದ ಆಧಾರದಲ್ಲಿ ಸಂತೋಷ ಅಪಘಾತದ ಸ್ಥಳದಲ್ಲಿ ಇರಲಿಲ್ಲ ಎಂದು, ಬದಲಾಗಿ ರಾಜೀವ್ ಮಂಜುನಾಥ ನಾಯ್ಕ ರವರೇ ಸ್ಥಳದಲ್ಲಿ ಇದ್ದರು ಎಂದು ಕಂಡು ಬಂದಿದೆ ಎಂದರೆ ಸರಿಯಲ್ಲ.

4. ಅಪಘಾತದ ಸಮಯದಲ್ಲಿ ರಾಜೀವ್ ಮಂಜುನಾಥ ನಾಯ್ಕ ಚಾಲನೆ ಮಾಡುತ್ತಿದ್ದು, ಸದರಿರವರಿಗೆ ಚಾಲನಾ ಪರವಾನಗಿ ಇಲ್ಲದ ಕಾರಣ ಸಂತೋಷ್ ರವರನ್ನು ಈ ಪ್ರಕರಣದಲ್ಲಿ ಚಾಲಕನನ್ನಾಗಿ ಸೇರಿಸಿದ್ದಾರೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ದುರುದ್ದೇಶದಿಂದ ಅಪಘಾತ ಏರ್ಪಟ್ಟ ಆರು ದಿನಗಳ ನಂತರದಲ್ಲಿ ಸಂತೋಷ್ ಕುಮಾರ್ ರವರೊಂದಿಗೆ ಷರೀಕಾಗಿ ಹಾಗೂ ತನಿಖಾಧಿಕಾರಿಗಳೊಂದಿಗೆ ಷರೀಕಾಗಿ, ಚಾಲಕನ ಹೆಸರು ಎಂಬಲ್ಲಿ ಸಂತೋಷ ಕುಮಾರರವರನ್ನು ಸೇರ್ಪಡೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ 1 ನೇ ಎದುರುದಾರರೇ ವಾಹನದ ಮಾಲೀಕರಾಗಿ ಚಾಲನೆ

ಮಾಡುತ್ತಿದ್ದು, ಸದರಿರವರಿಗೆ ಚಾಲನಾ ಪರವಾನಗಿ ಇಲ್ಲದ ಕಾರಣ, 2 ನೇ ಎದುರುದಾರರು ಯಾವುದೇ ಪರಿಹಾರವನ್ನು ಪಾವತಿಸಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಪರಿಹಾರವನ್ನು ಪಡೆಯುವ ಸಲುವಾಗಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು, ಸುಳ್ಳು ಅರ್ಜಿಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಎಸ್ ಎಸ್ ವಕೀಲರಿಂದಃ**

ಅಪಘಾತದ ಸಮಯದಲ್ಲಿ ಕೆಎ-30-ಎಂ-9562 ರ ಕಾರಿಗೆ ಸಂಬಂಧಿಸಿದಂತೆ ವಿಮಾ ಪಾಲಿಸಿ ಇತ್ತು ಎಂದರೆ ಸರಿ. ಸದರಿ ಕಾರಿನ ಚಾಲಕನಾದ ಸಂತೋಷ್ ಕುಮಾರ್ ರವರಿಗೆ ಚಾಲನಾ ಪರವಾನಗಿ ಇತ್ತು ಎಂದರೆ ಸರಿ. ಹಾಗಾಗಿ 2 ನೇ ಎದುರುದಾರರು ಪರಿಹಾರವನ್ನು ಪಾವತಿಸಲು ಬಾಧ್ಯಸ್ಥರು ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ

-